**ಸೆಲೆಬ್ರಿಟಿ** ■ ಬಿಂದು

## ಸ್ವರಾಜ್ ‘ಫೌಲ್’!

**ಈ**ತ ಇಂಗ್ಲೆಂಡಿನ ಅತಿ ದೊಡ್ಡ ಶ್ರೀಮಂತ. ದೊಡ್ಡ ಉದ್ಯಮಿ. ಸಂಸತ್ ಸದಸ್ಯ. ಬ್ರಿಟನ್ನಿನ ರಾಣಿ ಕರೆದು ನೈಟ್‌ಹುಡ್ ನೀಡಿದ್ದಾಳೆ. ಭಾರತ ಸರಕಾರ ‘ಪದ್ಮ ಭೂಷಣ’ ಪ್ರಶಸ್ತಿ ನೀಡಿದೆ. ಇಷ್ಟು ‘ದೊಡ್ಡ ಮನುಷ್ಯ’ನನ್ನು ಬ್ರಿಟನ್ನಿನ ಸಂಸತ್ ನಾಲ್ಕು ತಿಂಗಳ ಮಟ್ಟಿಗೆ ಸಂಸತ್ ಸದಸ್ಯತ್ವದಿಂದ ಅಮಾನತು ಮಾಡಿದೆ! ಅದಕ್ಕೆ ಕಾರಣ– ಸರಕಾರದ ಹಣವನ್ನು ಬೇಕಾಬಿಟ್ಟಿ ದುಂದುವೆಚ್ಚ ಮಾಡಿದ್ದು! ನಿಗದಿಯಾದ ಮೊತ್ತಕ್ಕಿಂತ ಹೆಚ್ಚು ಸರಕಾರದ ಹಣವನ್ನು ಖರ್ಚು ಮಾಡಿದ್ದು!

ಈತ ಸ್ವರಾಜ್ ಪಾಲ್. ಭಾರತದ ಪಂಜಾಬಿನ ಪುತ್ತರ್! ಅಮೆರಿಕದಲ್ಲಿ ಟೆಕ್ನಾಲಜಿ ಓದಿ, ಇಂಗ್ಲೆಂಡಿನ ತೆರಳಿ ಉಕ್ಕಿನ ಕಾರ್ಖಾನೆಗಳ ಸಾಮ್ರಾಜ್ಯ ಸ್ಥಾಪಿಸಿದವನು. ವಾಸ್ತವವಾಗಿ ಈತ ಇಂಗ್ಲೆಂಡಿಗೆ ಹೋದದ್ದು ಮಗಳ ಕ್ಷಯರೋಗ ಚಿಕಿತ್ಸೆಗೆ. ಆದರೆ ಅಲ್ಲೇ ನೆಲೆಸಿ ಉದ್ಯಮ ಸ್ಥಾಪಿಸಿದ್ದು, ತ್ರಿವಿಕ್ರಮನಾಗಿ ಬೆಳೆದದ್ದು ಅಚ್ಚರಿಯ ಕಥೆ. ಅದೇನೇ ಇರಲಿ, ಆನೆಯಂತಹ ಮನುಷ್ಯನ ಮಾನ ಅಡಿಕೆಯ ರೇಟಿಗೆ ಹೋದದ್ದು ಮಾತ್ರ ವಿಷಾದದ ಸಂಗತಿ. ಸಂಸತ್ತು ಅಮಾನತು ಮಾಡಿದ



ಬಳಿಕ ಎಚ್ಚೆತ್ತಿರುವ ಸ್ವರಾಜ್ ಪಾಲ್, ಅಕ್ರಮವಾಗಿ ಖರ್ಚು ಮಾಡಿದ 41982 ಪೌಂಡ್‌ಗಳನ್ನು ಈಗ ಖಜಾನೆಗೆ ಕಟ್ಟಿದ್ದಾನಂತೆ! ನಮ್ಮಲ್ಲಾದರೆ ಅಕ್ರಮ– ಸಕ್ರಮ ಆಗುತ್ತಿತ್ತು!



## ಓನ್ಲಿ ತರಕಾರಿ!

**ಪ**ಮೇಲಾ ಆ್ಯಂಡರ್‌ಸನ್ ಯಾನೆ 'ಪಾಪರಾಜಿ'ಗಳ ಮುದ್ದಿನ 'ಪಮ್ಮಿ' ಈಗ ಮಾಂಸ ತಿನ್ನುವುದನ್ನೂ, ಮದ್ಯ ಕುಡಿಯುವುದನ್ನೂ ಮರೆತೇ ಬಿಟ್ಟಿದ್ದಾಳಂತೆ! ಒಂದೂವರೆ ವರ್ಷದ ಹಿಂದೆ ‘ಓನ್ಲಿ ತರಕಾರಿ’ ನಿರ್ಧಾರಕ್ಕೆ ಬಂದ ಈಕೆ, ಈಗ ಬೀರ್, ವಿಸ್ಕಿ ಕಂಡರೂ ‘ಅರೆ ಇಸ್ಕಿ’ ಎಂದು ದೂರ ಸರಿಯುತ್ತಿದ್ದಾಳಂತೆ. ಈಗ ಬೀರ್, ವಿಸ್ಕಿ ಬದಲಿಗೆ ಈಕೆ ಕುಡಿಯುವುದು ಬ್ರಾಂಡೆಡ್ ಆ್ಯಪಲ್ ಜ್ಯೂಸ್!

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ‘ಪ್ರಾಣಿ ಹಕ್ಕುಗಳು ಮತ್ತು ವೆಜಿಟೇರಿಯನ್’ ಪರ ಪ್ರಚಾರಕ್ಕೆ ಉಪನ್ಯಾಸ ನೀಡಿದ ಪಮೇಲಾ, ‘ಯಾವುದೇ ಕಾರಣಕ್ಕೂ ಮನುಷ್ಯರು ಪ್ರಾಣಿ ಹಿಂಸೆ ಮಾಡಬಾರದು’ ಎಂದಳಂತೆ. ಸದ್ಯಕ್ಕೆ ಈಕೆ ನಟಿಸುತ್ತಿರುವ ಹೊಸ ಚಿತ್ರ ‘ದಿ ಕಮ್ಯೂಟರ್’ ಸುದ್ದಿಯಲ್ಲಿದೆ. ಈ ಚಿತ್ರದಲ್ಲಿ ಎಂದಿನಂತೆ ಮೈತುಂಬ ಕಾಣುವಂತೆ ಬಟ್ಟೆ ಧರಿಸಿರುವ (ಬಿಚ್ಚಿರುವ!) ಪಮ್ಮಿ, ಮಡಿವಂತ ಪ್ರೇಕ್ಷಕರಿಗೆ ಸಖತ್ ಹಿಂಸೆ ನೀಡುವುದು ಗ್ಯಾರಂಟಿಯಂತೆ!

## ಕೆಳಗಿಳಿದ ಟೈಗರ್

**2**81 ವಾರಗಳ ಕಾಲ ಸತತವಾಗಿ ಜಾಗತಿಕ ಗಾಲ್ಫ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡ ಟೈಗರ್ ವುಡ್ಸ್ ಈಗ ಅಗ್ರಸ್ಥಾನವನ್ನು ಕಳೆದುಕೊಂಡ ಸುದ್ದಿ ಬಂದಿದೆ. ಜಗತ್ತಿನ ಕ್ರೀಡಾಳುಗಳಲ್ಲೇ ಅತ್ಯಂತ ದೊಡ್ಡ ಶ್ರೀಮಂತನಾಗಿ, ಮೆರೆಯುತ್ತಿದ್ದ ಟೈಗರ್ ವುಡ್ಸ್ ಪಲ್ಲಂಗ ಪುರಾಣಗಳು ಕಳೆದ ವರ್ಷ ಒಂದೊಂದಾಗಿ ಬಿಚ್ಚಿಕೊಂಡ ಬಳಿಕ ಆತನ ‘ಅವನತಿಯ ಹಾದಿ’ ಸುಗಮವಾಯಿತು! ಹೆಂಡತಿಗೆ ಗೊತ್ತಾಗದಂತೆ ಒಂದಲ್ಲ, ಎರಡಲ್ಲ ಐದಾರು ಪ್ರಿಯತಮೆಯರ ಜತೆಗೆ ಚಕ್ಕಂದವಾಡಿದ ಸುದ್ದಿ ಬಹಿರಂಗವಾಗಿ ಟೈಗರ್ ಹಲವು ತಿಂಗಳ ಕಾಲ ಭೂಗತವಾಗಿದ್ದೂ ಆಯಿತು. ಆ ಬಳಿಕ ಹೆಂಡತಿಯೂ ಬಿಟ್ಟು ಹೋದಳು. ಹೋಗುವಾಗ ಕೋಟ್ಯಂತರ ಡಾಲರ್‌ಗೆ ಪರಿಹಾರದ ಕೇಸು ಜಡಿದದ್ದೂ ಆಯಿತು. ಈಗ ಟಾಪ್ ಪಟ್ಟದಿಂದ ಕೆಳಗಿಳಿದಿರುವ ಟೈಗರ್ ಆಟವಾಡುವ ಉಮೇದನ್ನೇ ಕಳೆದುಕೊಂಡಿದ್ದಾನಂತೆ!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65